# ಉಪ ತಹಶೀಲ್ದಾರರು ನಾಡಕಾರ್ಯಾಲಯ ತೆಕ್ಕಲಕೋಟೆ ಇವರ ನ್ಯಾಯಾಲಯದಲ್ಲಿ

**ವಾದಿಗಳು**
ಬಸಮ್ಮ ಗಂಡ
ದಿ.ನಾಗಪ್ಪ ಸೋಮಲಾಪುರ
ಬಳ್ಳಾರಿ(ತಾ.ಜಿ)

**ಪ್ರತಿವಾದಿಗಳು**
ಲೀಲಾವತಿ
ಗಂಡ: ಎಸ್.ಎಲ್.ಪೊಂಪನಗೌಡ
ಎಂ.ಸೂಗುರು ಗ್ರಾಮ.

| ಕ್ರ. ಸಂ. | ತಾಲೂಕು | ಹೋಬಳಿ | ಗ್ರಾಮ | ಸರ್ವೆ ನಂ. | ವಿಸ್ತೀರ್ಣ | ತಹರೆ |
|---|---|---|---|---|---|---|
| 1. | ಸಿರುಗುಪ್ಪ | ತೆಕ್ಕಲಕೋಟೆ | ಎಂ.ಸೂಗೂರು | 167A/2 | 1-00 | -- |

ಪೀಠಿಕೆ:-

ಸಿರುಗುಪ್ಪ ತಾಲೂಕು, ತೆಕ್ಕಲಕೋಟೆ ಹೋಬಳಿ, ಎಂ.ಸೂಗುರು ಗ್ರಾಮದ ಮೇಲ್ಕಾಣಿಸಿದ ಜಮೀನಿನ ಹಕ್ಕು ಬದಲಾವಣೆಗೆ ಸಂಬಂಧಿಸಿದಂತೆ ಡಾಕುಮೆಂಟ್ ನಂಬರ್:-27/13-14 ದಿನಾಂಕ:-06-09-2013ರ ಪ್ರಕಾರ ನೊಂದಾವಣೆಯಾದ ವಿಲುನಾಮ ದಸ್ತಾವೇಜು ಪ್ರಕಾರ ದಿ:17-06-2015 ರಂದು ಹಕ್ಕು ಬದಲಾವಣೆಗೆ ಅರ್ಜಿ ಸ್ವೀಕೃತವಾಗಿದ್ದು ತಾಲೂಕು ಕಛೇರಿ ಭೂಮಿ ಕೇಂದ್ರದಲ್ಲಿ ದಿನಾಂಕ:-19-06-2015 ರಂದು ನಮೂನೆ-21 ನೋಟೀಸ್ ತಯಾರಿಸಿ ಹಕ್ಕುಬದಲಾವಣೆ ಪ್ರಕ್ರಿಯೆ ಜರುಗಿಸಲು ಕಂದಾಯ ನೀರಿಕ್ಷಕರು ತೆಕ್ಕಲಕೋಟೆ ಇವರಿಗೆ ಕಳುಹಿಸಲಾಗಿ ಗ್ರಾಮದಲ್ಲಿ ನಮೂನೆ-21 ನೋಟೀಸ್ ಪ್ರಚುರಪಡಿಸಿರುವ ಸಮಯದಲ್ಲಿ ನಿಗದಿತ ಅವಧಿಯೊಳಗಾಗಿ ಆಸಕ್ತಿ ಉಳ್ಳವರಿಂದ ತಕರಾರು ಅರ್ಜಿ ಸ್ವೀಕೃತವಾಗಿರುವುದರಿಂದ ಇದೊಂದು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನೀರಿಕ್ಷಕರು ತೆಕ್ಕಲಕೋಟೆ ಇವರು ಕಡತವನ್ನು ಈ ಕಾರ್ಯಲಯಕ್ಕೆ ಕಡತ ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದ ವಿವಾದಾಸ್ಪದ ವಹಿಯಲ್ಲಿ ನಮೂದಿಸಿಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳು 1966 ನಿಯಮ 43 ಮತ್ತು 67 ರಂತೆ ವಿಚಾರಣೆ ದಿನಾಂಕ ನಿಗದಿಪಡಿಸಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟಿಸು ನೀಡಿ ವಿಚಾರಣೆಯನ್ನು ಮುಕ್ತಾಯ ಗೊಳಿಸಲಾಗಿರುತ್ತದೆ.

ಸದ್ರಿ ವಿವಾದಾಸ್ಪದ ಪ್ರಕರಣದ ವಿಚಾರಣೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ವಿಚಾರಣೆ ಸಮಯದಲ್ಲಿ ಪ್ರತಿವಾದಿಗಳು ಸದ್ರಿ ಜಮೀನನ್ನು ನನ್ನ ಸಾಕು ತಂದೆಯಾದ ಮುಕ್ಕುಂದಿ ನಾಗಪ್ಪ ಇವರು ನನ್ನ ಹೆಸರಿಗೆ ಡಾಕುಮೆಂಟ್ ನಂಬರ್:27/13-14 ದಿನಾಂಕ:06-09-2013ರ ಪ್ರಕಾರ ವೀಲುನಾಮ ದಸ್ತಾವೇಜು ಮಾಡಿಕೊಟ್ಟಿರುತ್ತಾರೆ. ಕಾರಣ ನನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ. ವಾದಿಗಳು ತಮ್ಮ ತಕರಾರನ್ನು ಪುಷ್ಟೀಕರಿಸುವಲ್ಲಿ ವಿಫಲವಾಗಿರುತ್ತಾರೆ.

ವಿವಾದಾಸ್ಪದ ಪ್ರಕರಣದ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಸದ್ರಿ ಪ್ರಕರಣವು ನೊಂದಾಯಿತ ವಿಲುನಾಮ ದಸ್ತಾವೇಜು ಆಗಿರುವುದರಿಂದ ~~ಭೂ ಕಂದಾಯ~~ ನೊಂದಾವಣೆ ಅಧಿನಿಯಮ ಕಾಯ್ದೆ 1908 ಕಲಂ 17ರ ಪ್ರಕಾರ ಯಾವುದೇ ನೊಂದಾಯಿತ ದಸ್ತಾವೇಜನ್ನು ಗೈರು ಮಂಜೂರು ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಈ ಕಾರ್ಯಾಲಯದ ವ್ಯಾಪ್ತಿಗೆ ಒಳಪಡದಿರುವುದರಿಂದ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128 ಮತ್ತು 129ರ ಪ್ರಕಾರ ಕ್ರಮಕೈಗೊಳ್ಳುವ ಅವಶ್ಯಕತೆ ಇರುವುದರಿಂದ ಈ ಕೆಳಗಿನಂತೆ.

ಪುಟ-2ಕ್ಕೆ

ಸಂ/ಕಂ/ಹ.ಬ/ವಿವಾದ/49/2015-16 ದಿನಾಂಕ:-03-05-2016

**-:ಆದೇಶ:-**

ಪೀಠೀಕೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಹಾಗೂ ದಾಖಲೆಗಳ ಆಧಾರದನ್ವಯ ಸಿರುಗುಪ್ಪ ತಾಲ್ಲೂಕು, ತೆಕ್ಕಲಕೋಟೆ ಹೋಬಳಿ, ಮಣ್ಣೂರು ಸೂಗೂರು ಗ್ರಾಮದ ಸರ್ವೆ ನಂ:167A/2 ಪೈಕಿ ವಿ:1-00 ಎಕರೆ ಜಮೀನನ್ನು ಮೂಲ ಪಟ್ಟಾದಾರರ ಹೆಸರನ್ನು ಕಡಿಮೆಮಾಡಿ ಡಾಕುಮೆಂಟ್ ನಂಬರ್:27/2013-14 ದಿ:06-09-2013ರ ಪ್ರಕಾರ ವೀಲ್‌ನಾಮೆ ದಸ್ತಾವೇಜು ಪ್ರಕಾರ ಎಸ್.ಪಿ.ಶರಣಬಸವ ಮೈನರ್ ಗಾರ್ಡಿಯನ್ ತಾಯಿ ಶ್ರೀಮತಿ ಲೀಲಾವತಿ ಗಂಡ: ಎಸ್.ಎಲ್.ಪೊಂಪನಗೌಡ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಸದ್ರಿ ಆದೇಶವನ್ನು ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ಓದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ: 03-05-2016 ರಂದು ಬಹಿರಂಗವಾಗಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ತೆಕ್ಕಲಕೋಟೆ

ಪ್ರತಿಯನ್ನು:-
1)ವಾದಿ ಮತ್ತು ಪ್ರತಿವಾದಿಗಳಿಗೆ
2)ಗಣೀಕರಣ ಶಾಖೆಗೆ,